ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಇಲ್ಲ.

ಆ) ಪೂರ್ವ ಯೋಜಿತ ಯೋಜನೆ ಪ್ರಕಾರ ಬಿಜಾಪುರದ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನಲ್ಲಿ ಪೋಲೀಸ್ ಠಾಣೆ ಶೀಘ್ರವಾಗಿ ತೆರೆಯಂವ ಪ್ರಸ್ತಾವನೆ ಪರಿಶೀಲಿಸಲಾಗುವುದು.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೇ, ಬಿಜಾಪುರದ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಪೋಲೀಸ್ ಠಾಣೆಯನ್ನು ಯಾವ ತಿಂಗಳಿಂದ ಪ್ರಾರಂಭ ಮಾಡುತ್ತಾರೆ ಎನ್ನುವ ಒಂದು ಖಚಿತವಾದಂಥ ದಿನಾಂಕ ನನಗೆ ಮಾನ್ಯ ಮಂತ್ರಿಗಳು ಕೊಡಬೇಕು. ಏತಕ್ಕೆಂದರೆ ನಾನು ಚಿಕ್ಕವನಾಗಿದ್ದಾಗ ಅಲ್ಲಿ ಸುಮಾರು ಎರಡೇ ಎರಡು ಪೋಲೀಸ್ ಠಾಣೆಗಳು ಇದ್ದವು. ಆಂದಿನಿಂದ ಇಂದಿನವರೆವಿಗೆ ಒಂದು ಪೋಲೀಸ್ ಠಾಣೆಯನ್ನು ಸಹ ಸರ್ಕಾರದವರು ಜಾಸ್ತಿ ಮಾಡಿಲ್ಲ. ಇಲ್ಲಿ ಪ್ರತಿ ದಿವಸ ದರೋಡೆ ಮತ್ತು ಕಳ್ಳತನಗಳು ಜಾಸ್ತಿಯಾಗುತ್ತಿರುತ್ತವೆ. ಆದ್ದರಿಂದ ಆದಷ್ಟು ಬೇಗ ಒಂದು ಪೋಲೀಸ್ ಠಾಣೆ ಬೇಕು. ಇದಕ್ಕೆ ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಜೂನ್ ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ.

ಪ್ರಶ್ನೆ ಸಂಖ್ಯೆ ೫೬೪ (೧೫೩೦)

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ನಿಷೇದ ಕಾಯ್ದೆ ಮೇರೆಗೆ ದಾಖಲು ಮಾಡಿದ ಪ್ರಕರಣಗಳು,

೧೫೧೪. ಶ್ರೀ ಎ. ಎಮ್. ಹಿಂಡಸ್‌ಗೇರಿ (ಹುಬ್ಬಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವರದಕ್ಷಿಣೆ ನಿಷೇದ ಕಾಯಿದೆ ಅನ್ವಯ ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ ನೇ ಸಾಲಿನಲ್ಲಿ ನೊಂದಾಯಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ನೊಂದವರಿಂದ ಬಂದ ದೂರುಗಳಿಂದ ಮತ್ತು ಪೋಲೀಸರ ಸ್ವತಹ ತಮಗೆ ತಲುಪಿದ ವರ್ತಮಾನದ ಮೇರೆಗೆ ನೊಂದಾಯಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು ?

ಇ) ವರದಕ್ಷಿಣೆಯಿಂದ ಮತ್ತು ವಧು ದಹನದ ಮತ್ತು ಸಂಬಂಧಿಸಿದ ಇತರೆ ವಿಷಯಗಳಿಂದ ಉದ್ಭವಿಸುವ ಪ್ರಕರಣಗಳನ್ನು ಪರಿಶೀಲಿಸಲು ಸಮಾಜ ಕಾರ್ಯಕರ್ತರು, ಸಮಾಜ ಚಿಂತಕರು ಮತ್ತು ಸಮಾಜ ವಿಜ್ಞಾನಿಗಳನ್ನೊಳಗೊಂಡ ಸಮಿತಿಯೊಂದನ್ನು ಪ್ರತಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸರ್ಕಾರವು ರಚಿಸುವುದೆ ?

ಈ) ವರದಕ್ಷಿಣೆ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಉದ್ಭವಿಸುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಪ್ರತ್ಯೇಕ ನ್ಯಾಯಾಲಯಗಳು ನ್ಯಾಯಾಧಿಕರಣಗಳನ್ನು ಸರ್ಕಾರವು ರಚಿಸುವುದೆ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ನೊಂದಾಯಿಸಲಾದ ಪ್ರಕರಣಗಳು ಈ ಕೆಳಕಂಡಂತಿವೆ.

	ವರದಕ್ಷಿಣೆ ಸಾವುಗಳು	ವರದಕ್ಷಿಣೆ ಕಿರುಕುಳ
೧೯೮೩-೮೪	೪೦	೨೫
೧೯೮೪-೮೫	೪೩	೨೮
೧೯೮೫-೮೬	೨೦	೩೨
(೧-೪-೧೯೮೫ ರಿಂದ ೨೦-೨-೧೯೮೬ ರವರೆಗೆ)		

ಅ)	ನೊಂದವರಿಂದ ನೊಂದಾಯಿಸಿದವು.		ಪೋಲೀಸರೇ ಸ್ವತಹ ನೊಂದಾಯಿಸಿದವು
೧೯೮೩–೮೪	೩೭	೨೫	೩
೧೯೮೪–೮೫	೩೮	೨೮	೫
೧೯೮೫–೮೬	೧೯	೩೨	೧

ಇ) ಪ್ರತಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಇಂಥಹ ಒಂದು ಸಮಿತಿ ರಚಿಸಿ ಕಾರ್ಯ ಸಾಧ್ಯತೆ ಮಾಡುವುದಕ್ಕಾಗುವುದಿಲ್ಲ.

ಈ) ಸರ್ಕಾರದ ಮುಂದೆ ಅಂಥ ಪ್ರಸ್ತಾವನೆ ಇಲ್ಲ.

ಶ್ರೀ ಎ. ಎಂ. ಹಿಂಡಸಗೆರಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೊಟ್ಟಂತಹ ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ, ಪೋಲೀಸ್ ಇಲಾಖೆಯವರಂ ಈ ವರದಕ್ಷಣೆ ಕೇಸ್‌ಗಳ ಬಗ್ಗೆ ಸರಿಯಾಗಿ ಬುಕ್ ಮಾಡುತ್ತಿಲ್ಲವೆಂದು. ಆದ್ದರಿಂದ ತಮ್ಮ ಇಲಾಖೆಯನ್ನು ಸ್ವಲ್ಪ ಚುರುಕುಗೊಳಿಸಬೇಕು. ಮತ್ತು ಪ್ರತಿಯೊಂದು ಪೋಲೀಸ್ ಸರ್ಕಲ್‌ನಲ್ಲಿ ಒಂದೊಂದು ಪಬ್ಲಿಕ್ ಕಮಿಟಿಗಳನ್ನು ನೇಮಂಕ ಮಾಡಬೇಕು. ಅಥವಾ ಇಂತಹ ಕೇಸ್‌ಗಳನ್ನು ಪತ್ತೆ ಹಚ್ಚಿ ಆ ಕೇಸ್‌ಗಳನ್ನು ಬೇಗ ಇತ್ಯರ್ಥ ಮಾಡಲು ಒಂದೊಂದು ಟ್ರಿಬ್ಯುನಲ್ ಅಥವಾ ಸ್ಪೆಷಲ್ ಕೋರ್ಟ್ ಮಾಡಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಬಿ. ರಾಚಯ್ಯ.—ಸ್ವಾಮಿ ಮಾನ್ಯ ಸದಸ್ಯರು ಹೇಳಿದ ಹಾಗೆ ಸ್ಪೆಷಲ್ ಕೋರ್ಟ್‌ಗಳನ್ನು ತೆರೆಯಲು ಆಗುವುದಿಲ್ಲ. ಕಾರಣ ರಾಜ್ಯದ ಹೈ ಕೋರ್ಟ್‌ನವರು ಇದಕ್ಕೆ ಒಪ್ಪುವುದಿಲ್ಲ. ಎರಡನೆಯದಾಗಿ, ಸಾಮಾಜಿಕ ಕಾರ್ಯಕರ್ತರು, ವಿಜ್ಞಾನಿಗಳ ಮತ್ತು ಮಹಿಳಾ ಕಾರ್ಯಕರ್ತರ ಸಮಾಲೋಚನೆಯಲ್ಲಿ ಸಲಹಾ ಸಮಿತಿಗಳನ್ನು ಮಾಡಿ ಅವರಿಂದ ಸಲಹೆಗಳನ್ನು ಪಡೆದು ನಮ್ಮ ಇಲಾಖೆಯನ್ನು ಚುರುಕುಗೊಳಿಸಿ ಬೇಗ ಇಂತಹ ದೂರುಗಳನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಬಹುದು

ಚುಕ್ಕೆ ಪ್ರಶ್ನೆ ಸಂಖ್ಯೆ ೫೬೭ (೧೫೨೧)
(ಮಾನ್ಯ ಸದಸ್ಯರು ಗೈರು ಹಾಜರಿದ್ದರು)
ಚುಕ್ಕೆ ಪ್ರಶ್ನೆ ಸಂಖ್ಯೆ ೫೬೭ (೧೬೯೪)
(ಮಾನ್ಯ ಸದಸ್ಯರು ಗೈರು ಹಾಜರಿದ್ದರು)
ಚುಕ್ಕೆಪ್ರಶ್ನೆ ಸಂಖ್ಯೆ ೫೬೮ (೧೬೨೦)
(ಉತ್ತರ ಲಗತ್ತಿಸಿದೆ)

ಕಡೂರು ತಾಲ್ಲೂಕಿನಲ್ಲಿರುವ ಯಗಟಿ ಗ್ರಾಮಕ್ಕೆ ಆಸ್ಪತ್ರೆಯ ಮಂಜೂರಾತಿ.

೧೬೨೦: ಶ್ರೀ ಜಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಡೂರು ತಾಲ್ಲೂಕಿನ ಯಗಟಿ ಗ್ರಾಮಕ್ಕೆ ಹತ್ತು ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಮಂಜೂರಾಗಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಸದರಿ ಆಸ್ಪತ್ರೆಯಲ್ಲಿ ಹೆರಿಗೆ ವಿಭಾಗವನ್ನು ಯಾವಾಗ ಆರಂಭಿಸಲಾಗುವುದು?

ಇ) ಹಾಗಿಲ್ಲದಿದ್ದಲ್ಲಿ ೧೯೮೬–೮೭ನೇ ಸಾಲಿನಲ್ಲಿ ಮಂಜೂರು ಮಾಡಿ ಆರಂಭಿಸಲಾಗುವುದೇ ?